ದಿನಾಂಕ:14/02/2023 ರಂದು ಸಾಕ್ಷಿಯನ್ನು ಪಾಟೀ ಸವಾಲಿಗಾಗಿ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಕೆ.ಸಿ.ಪಿ. ವಕೀಲರಿಂದಃ–**

1. ನಿ.ಆರ್-1 ನೋಟಿಂಗ್ ಶೀಟ್(ವಿಚಾರಣಾ ಟಿಪ್ಪಣಿ ಪುಟ)ದಲ್ಲಿ ದಿನಾಂಕಃ10/1/2018ನ್ನು ತಿದ್ದುಪಡಿ ಮಾಡಲಾಗಿದೆ ಅಂದರೆ ಸರಿ. ತಿದ್ದುಪಡಿ ಮಾಡಿರುವ ಬಗ್ಗೆ ಚಿಕ್ಕ ರುಜು ಮಾಡಿರುವುದಿಲ್ಲ. ನಿ.ಆರ್-1 ಸದರಿ ನೋಟಿಂಗ್ ಶೀಟನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವಾಗ ತಿದ್ದುಪಡಿ ಮಾಡಿ ಹಾಜರುಪಡಿಸಿರುತ್ತೇವೆ ಅಂದರೆ ಸರಿಯಲ್ಲ. ಸದರಿ ಟಿಪ್ಪಣಿ ಶೀಟನ್ನು ನಮ್ಮ ಅನುಕೂಲದ ಪ್ರಕಾರ ತಯಾರು ಮಾಡಿ ನಂತರ ಹಾಜರುಪಡಿಸಿರುತ್ತೇವೆ ಅಂದರೆ ಸರಿಯಲ್ಲ. ನಿ.ಆರ್-4ನ್ನು ಅರ್ಜಿದಾರ ಕೊಟ್ಟ ಪತ್ರ ಅಂದರೆ ಸರಿ. ಸದರಿ ಪತ್ರದಲ್ಲಿ ಅರ್ಜಿದಾರ ಕರ್ತವ್ಯಕ್ಕೆ ಹಾಜರಾಗದೇ ಇರುವುದಕ್ಕೆ ಏನು ತೊಂದರೆ ಆಗಿತ್ತು ಎಂಬ ಬಗ್ಗೆ ತಿಳಿಸಿರುತ್ತಾನೆ ಅಂದರೆ ಸರಿ. ನಿ.ಆರ್-5 ಅರ್ಜಿದಾರನಿಗೆ ಸಂಬಂಧಿಸಿದ ವೈದ್ಯಕೀಯ ಪ್ರಮಾಣಪತ್ರ ಅಂದರೆ ಸರಿ. ಸದರಿ ಪ್ರಮಾಣ ಪತ್ರವನ್ನು ನಾನು ವಿಚಾರಣಾ ವೇಳೆಯಲ್ಲಿ ಪರಿಶೀಲಿಸಿದ್ದೇನೆ ಅಂದರೆ ಸರಿ. ನಿ.ಆರ್-6 ಜೊತೆಗೆ ಹಾಜರುಪಡಿಸಿದ ಅರ್ಜಿದಾರ ಗೈರು ಹಾಜರಾತಿ ದಿನವಾರು ಪಟ್ಟಿ ಇದನ್ನು ಮೂಲ ಹಾಜರಾತಿ ಪುಸ್ತಕವನ್ನು ಪರಿಶೀಲಿಸಿ ಬರೆದದ್ದು ಆಗಿರುತ್ತದೆ. ಮೂಲ ಹಾಜರಾತಿ ಪುಸ್ತಕದ ದೃಢೀಕೃತ ನಕಲು ಹಾಜರುಪಡಿಸಿಲ್ಲ. ಮೂಲ ಹಾಜರಾತಿ ಪುಸ್ತಕ ಮತ್ತು ನಿ.ಆರ್-6ರಲ್ಲಿ ಕಾಣಿಸಿದ ಮಾಹಿತಿ ಒಂದಕ್ಕೊಂದು ವ್ಯತಿರಿಕ್ತವಾಗಿವೆ ಅಂದರೆ ಸರಿಯಲ್ಲ. ನಿ.ಆರ್-12 ನೋಟೀಸು ಅರ್ಜಿದಾರನಿಗೆ ತಲುಪಿಲ್ಲ ಅಂದರೆ ಸುಳ್ಳು. ನಿ.ಆರ್-15 ಅರ್ಜಿದಾರನ ಹೆಚ್ಚುವರಿ ಗೈರು ಹಾಜರಾದ ಅಂದರೆ ಮುಂದುವರೆದ ಅವಧಿಗೆ ಸಂಬಂಧಿಸಿದ ಗೈರು ಹಾಜರಾತಿಯ ಮಾಹಿತಿ ಪಟ್ಟಿ. ಇದನ್ನು ಕೂಡ ಹಾಜರಾತಿ ಪುಸ್ತಕ ನೋಡಿ ಬರೆಯಲಾಗಿದೆ. ನಿ.ಆರ್-15 ರಲ್ಲಿ ಮೂಲ ದಾಖಲೆ ನೋಡಿ ಬರೆಯಲಾಗಿದೆ ಎಂಬ ಷರಾ ಇಲ್ಲ ಅಂದರೆ ಸರಿ. ನಿ.ಆರ್-16ರಲ್ಲಿ ಅರ್ಜಿದಾರ ಆಪಾದನಾ ಪತ್ರಕ್ಕೆ ಉತ್ತರಿಸುತ್ತಾ ತಾನು ಗೈರು ಹಾಜರಿದ್ದ ಕಾರಣ ಮತ್ತು ಚಿಕಿತ್ಸೆ ಪಡೆದು ಕೊಂಡ ಆಸ್ಪತ್ರೆಯ ವಿವರ ತಿಳಿಸಿದ್ದಾನೆ ಅಂದರೆ ಸರಿ. ನಿ.ಆರ್-18 ಎನಕ್ವೈರಿ ಪ್ರಕ್ರಿಯೆಯನ್ನು ಇಲಾಖಾ ಅಧಿನಿಯಮದ ಪ್ರಕಾರ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಇಲಾಖಾ ದಾಖಲೆಗಳು ಅನುಕ್ರಮವಾಗಿ ಇರುವುದಿಲ್ಲ ಅಂದರೆ ಸರಿಯಲ್ಲ. ಅರ್ಜಿದಾರ ತನ್ನ ಸಂರಕ್ಷಣಾ ಹೇಳಿಕೆ ನಿ.ಆರ್-19 ರಲ್ಲಿ ತನ್ನ ಗೈರು ಹಾಜರಿಗೆ ಕಾರಣ ಕೊಟ್ಟಿದ್ದಾನೆ ಅಂದರೆ ಸರಿ. ನನ್ನ ವಿಚಾರಣಾ ಹಂತದಲ್ಲಿ ನಾನು ಅರ್ಜಿದಾರ ನೀಡಿದ ಕಾರಣ ಮತ್ತು ದಾಖಲೆಗಳನ್ನು ಪರಿಶೀಲಿಸದೇ ಆತನಿಗೆ ವ್ಯತಿರಿಕ್ತವಾಗಿ ಮತ್ತು ಏಕಪಕ್ಷೀಯ ವಿಚಾರಣಾ ಫಲಿತಾಂಶವನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ. ನಾನು ನೀಡಿದ ಫಲಿತಾಂಶ ತಾರತಮ್ಯ

(ಬಯಾಸ್) ದಿಂದ ಕೂಡಿದೆ ಅಂದರೆ ಸರಿಯಲ್ಲ. ನನ್ನ ವಿಚಾರಣಾ ಕಾಲದಲ್ಲಿ ಅರ್ಜಿದಾರ ಅಮಾಯಕನಾಗಿದ್ದಾನೆ ಮತ್ತು ಗೈರು ಹಾಜರಾತಿಗೆ ಸರಿಯಾದ ಕಾರಣಗಳನ್ನು ನೀಡಿದ್ದರೂ ಸಹಿತ, ಆತನಿಗೆ ವ್ಯತಿರಿಕ್ತವಾದ ವಿಚಾರಣಾ ಫಲಿತಾಂಶವನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

*(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.